# ಕಾಲ ಮತ್ತು ಮನುಷ್ಯ

ಮನುಷ್ಯನನ್ನು ಅತ್ಯಂತ ಗಾಢವಾಗಿ ಕಾಡುವ ಸಂಗತಿಗಳಲ್ಲಿ ಕಾಲವೆಂಬುದು ಪ್ರಮುಖವಾದುದು. ತಾತ್ವಿಕ ನೆಲೆಯಲ್ಲಿ ಮಾತ್ರವಲ್ಲ, ವೈಜ್ಞಾನಿಕ ದೃಷ್ಟಿಕೋನದಿಂದಲೂ ಪ್ರಜ್ಞಾವಂತ ಮಾನವ ಕಾಲವನ್ನು ಕುರಿತು ಯೋಚಿಸುತ್ತಲೇ ಬಂದಿದ್ದಾನೆ. ಕಾಲದ ಅಸ್ತಿತ್ವದ ಅರಿವು ಮನೋದೇಹಿಯಾದ ಮನುಷ್ಯನಿಗೆ ದಕ್ಕುವುದು ಆತನ ಮಾನಸಿಕ ಅನುಭವಗಳ ಹಾಗೂ ದೈಹಿಕ ಬದಲಾವಣೆಗಳ ಮೂಲಕವೆನ್ನಬಹುದು. ಆದರೆ ಅಮೂರ್ತವಾಗಿರುವ ಕಾಲವನ್ನು ಮೂರ್ತ ಇಂದ್ರಿಯಾನುಭವವನ್ನಾಗಿ ಮಾಡಿಕೊಳ್ಳುವ ಸಲುವಾಗಿ ಮನುಷ್ಯ ಹಂಬಲಿಸುತ್ತಾ, ಆ ದಿಕ್ಕಿನಲ್ಲಿ ಹಲವು ಪ್ರಯತ್ನಗಳನ್ನೂ ಮಾಡಿದ್ದಾನೆ. ಮೊದ ಮೊದಲು ಸೂರ್ಯ, ಚಂದ್ರ ಮುಂತಾದ ಆಕಾಶ ಕಾಯಗಳ ಚಲನೆಗಳ ಮೂಲಕ, ಋತು ಋತುಗಳಲ್ಲಾಗುವ ನೈಸರ್ಗಿಕ ಬದಲಾವಣೆಗಳ ಮೂಲಕ ಕಾಲವನ್ನು ಅರ್ಥೈಸಿಕೊಳ್ಳಲು ಯತ್ನಿಸಿದ ಮನುಷ್ಯ; ಕ್ರಮೇಣ ಸೆಕೆಂಡು, ನಿಮಿಷ, ಗಂಟೆ, ದಿನ, ವಾರ ತಿಂಗಳು, ವರ್ಷ– ಮುಂತಾದ ಪರಿಕಲ್ಪನೆಗಳನ್ನು ಸೃಷ್ಟಿಸಿಕೊಂಡು 'ಅನಿರ್ವಚನೀಯ' ಎನ್ನಿಸುವ ಕಾಲವನ್ನು ಮಾತುಗಳಲ್ಲಿ ಹಿಡಿದಿರಿಸುವ ಕೆಲಸ ಮಾಡಿದ್ದಾನೆ.

ಮನುಷ್ಯನ ಬದುಕು ಚಲನ ಶೀಲವಾದ ಕಾಲದ ಪ್ರವಾಹದಲ್ಲಿ ಸೇರಿಕೊಂಡು ತಾನೂ ಚಲಿಸುತ್ತಿರುತ್ತದೆ. ಕಾಲ ಪ್ರವಾಹ ಹಾಗೂ ಜೀವವಾಹಿನಿ– ಇವೆರಡೂ ಒಮ್ಮುಖವಾಗಿ ಚಲಿಸುವಂಥವು; ಏಕಮುಖ ಗಾಮಿಗಳು, ಕಾಲದ ಮರು ಬಳಕೆ ಸಾಧ್ಯವಿಲ್ಲದಿರುವಂತೆಯೇ, ನಮ್ಮ ಗತ ಬದುಕಿನ ಮರುಬಳಕೆಯೂ ಅಸಾಧ್ಯ. ನೋಡ ನೋಡುತ್ತಿರುವಂತೆಯೇ 'ಈ ದಿನ'ವೆಂಬುದು 'ನಿನ್ನೆ'ಯಾಗಿ, 'ನಾಳೆ' ಎಂಬುದು 'ಈದಿನ'ವಾಗಿ ಪರಿವರ್ತನೆಗೊಂಡು ಇತಿಹಾಸದ ಗರ್ಭವನ್ನು ಸೇರುತ್ತವೆ. ಈ ಪ್ರಕ್ರಿಯೆಯನ್ನು ತಡೆಯಲು ಯಾರಿಂದಲೂ ಸಾಧ್ಯವಾಗದು. ಆದ್ದರಿಂದಲೇ ಕವಿ ಗಂಗಾಧರ ಚಿತ್ತಾಲರು ಹರಿಯುವ ನೀರಿಗೆ ಕಾಲವನ್ನು ಹೋಲಿಸುತ್ತಾ– 'ನಿನ್ನೊಡಲಿನೊಳಾಧದಲಿ, ಒಮ್ಮೆ ಮಿಂದಲ್ಲಿ ಇನ್ನೊಮ್ಮೆ ಮಿಂದವರಾರು...? ನಿನ್ನ ಅವಿರತ ಗತಿಯಲ್ಲಿ ನಿಮಿಷಕ್ಕು ಮಿಕ್ಕಿ ಒಂದೆಡೆಗೆ ನಿಂತವರಾರು...?' ಎಂದು ಉದ್ಗರಿಸಿರುವುದು.

ಕಾಲ ಪ್ರವಾಹದಲ್ಲಿ ಸೇರಿಕೊಂಡಿರುವ ಮಾನವನ ಬದುಕು ತನ್ನ ಅಸ್ತಿತ್ವದ ಅವಧಿಯಲ್ಲಿ, ದೈಹಿಕ ಹಾಗೂ ಮಾನಸಿಕ ಅವಸ್ಥಾಂತರಗಳನ್ನು ಪಡೆಯುತ್ತಾ, ಬೇರೆ ಬೇರೆ ಘಟ್ಟಗಳನ್ನು ಹಾದು ಹೋಗುತ್ತದೆ. ಶೈಶವ ಹಾಗೂ ಬಾಲ್ಯದ ಹಂತಗಳಲ್ಲಿ ಕಾಲದ ಬಗ್ಗೆ ಚಿಂತಿಸುವುದಕ್ಕೆ ವ್ಯವಧಾನವೇ ಇರುವುದಿಲ್ಲ. ಪಂಚೇಂದ್ರಿಯಗಳ ಮೂಲಕ ಪ್ರಪಂಚದ ಅನುಭವಗಳನ್ನು ಹೀರಿಕೊಳ್ಳುತ್ತಾ, ಪ್ರಪಂಚದ ಬಗೆಗಿನ ಕುತೂಹಲವನ್ನು ತಣಿಸಿಕೊಳ್ಳುವುದರಲ್ಲಿಯೇ ಶೈಶವ ಬಾಲ್ಯಗಳು ಉರುಳಿ ಹೋಗುತ್ತವೆ, ತಾರುಣ್ಯ ಯೌವ್ವನಗಳಲ್ಲಿ ಕಾಲದ ಇರುವಿಕೆ ಆಗೊಮ್ಮೆ ಈಗೊಮ್ಮೆ ಗಮನಕ್ಕೆ ಬಂದರೂ, ಮನುಷ್ಯ ತಾನು ಕಾಲಾಧೀನನಲ್ಲವೆಂಬ ಭ್ರಮೆಯಲ್ಲಿ, ಹುಮ್ಮಸ್ಸಿನಲ್ಲಿ ಬದುಕುತ್ತಾನೆ. ಆದರೆ ನಿಧಾನವಾಗಿ ಬದುಕಿನ ವಾಸ್ತವಗಳನ್ನು ಎದುರಿಸಲೇಬೇಕಾಗುತ್ತದೆ. ಜೀವನದ ಏರುವೆಯ ಹಾದಿ ಕೊನೆಗೊಂಡು ಇಳಿಜಾರಿನ ದಾರಿ ಶುರುವಾಗುತ್ತದೆ. ಮುಪ್ಪು ಮನುಷ್ಯನನ್ನು ದೈಹಿಕವಾಗಿ ಕುಗ್ಗಿಸಿ, ಮಾನಸಿಕವಾಗಿ ಹದಗೊಳಿಸುತ್ತದೆ. ಬದುಕಿನ ಗಡಿಯಾರದ ಕೊನೆಯ ಘಂಟೆಗಳ ಸದ್ದು ಕೇಳಿಸಲಾರಂಭಿಸುತ್ತದೆ. ಹೀಗೆ ಕಾಲವೆಂಬುದು ಮನುಷ್ಯನನ್ನು ಹಲವು ಘಟ್ಟಗಳಲ್ಲಿ ಕರೆದೊಯ್ದು, ಅಂತಿಮವಾಗಿ ತನ್ನಲ್ಲಿ ಲೀನವಾಗಿಸಿಕೊಳ್ಳುತ್ತದೆ. ಈ ಹಂತಗಳನ್ನೇ ಶೇಕ್ಸ್‌ಪಿಯರ್ 'ಜೀವನದ ಸಪ್ತಾಂಕಗಳು' ಎಂದು ವರ್ಣಿಸಿರುವುದು.

ನಾವು ಕಾಲವನ್ನು ಸಮಯ ಹಾಗೂ ಸಾವು ಅಥವಾ ಅಂತ್ಯ ಎಂಬರ್ಥಗಳಲ್ಲಿ ಬಳಸುತ್ತೇವಷ್ಟೆ? ಮನುಷ್ಯನ ಹುಟ್ಟಿನಿಂದ ಆತನ ಅಂತ್ಯದವರೆವಿಗೂ ಕಾಲವೆಂಬುದು ಆತನನ್ನು ಹಿಂಬಾಲಿಸಿ, ಅವನಲ್ಲಿನ ಏರಿಳಿತಗಳೆಲ್ಲದಕ್ಕೂ ಕಾರಣವಾಗುತ್ತದೆ; ಸಾಕ್ಷಿಯೂ ಆಗುತ್ತದೆ. ಕಾಲದ ಈ ವರ್ತನೆಯನ್ನೇ ಆಚಾರ್ಯ ಶಂಕರರು 'ಕಾಲನ ಕ್ರೀಡೆ' ಎಂದಿರುವುದು. ಸೃಷ್ಟಿ ಮತ್ತು ಲಯ ಕಾಲಕ್ರೀಡೆಯ ಬಹು ಮುಖ್ಯ ಭಾಗಗಳು; ಕಾಲದ ನಿರಂತರ ಪ್ರವಾಹದಲ್ಲಿ ಅವೆರಡೂ ಸಾಪೇಕ್ಷ ಘಟ್ಟಗಳು. ಕವಿ ಪು.ತಿ.ನ. ಸೃಷ್ಟಿ ಮತ್ತು ಲಯಗಳನ್ನು ರಚನೆ ಮತ್ತು ವಿಘಟನೆ ಎಂದು ಭಾವಿಸುತ್ತಾರೆ. ಕಾಲನೆಂಬ ಶಿಲ್ಪಿ ಪಂಚಭೂತಗಳಿಂದ ರಚಿಸುವ ಕಲಾಕೃತಿಯೇ ಸೃಷ್ಟಿ. ಅದನ್ನು ನೋಡಿ, ಆನಂದಿಸಿ, ನಿಧಾನವಾಗಿ, ನಾಜೂಕಾಗಿ ಆತ ಬಿಚ್ಚಿಡುವುದೇ ಲಯ– ಎನ್ನುತ್ತಾರೆ ಪು.ತಿ.ನ.

ಏನೇ ಆದರೂ ಮನುಷ್ಯ ಕಾಲಾಧೀನ. ಕಾಲಾತೀತನಾಗಬೇಕೆಂಬುದು ಆತನ ಕನಸು!

■ **ವೈನತೇಯ**

## ಮಾತೇ ಮುತ್ತು

★ ಬುದ್ಧಿವಂತನನ್ನು ಅವನ ಅನುಪ ಸ್ಥಿತಿಯಲ್ಲಿ ಪ್ರಶಂಸಿಸು, ಆದರೆ ಸ್ತ್ರೀಯನ್ನು ಅವಳೆದುರೇ ಪ್ರಶಂಸೆ ಮಾಡು!

-ಫ್ರೆಂಚ್ ಗಾದೆ

★ ಬೇರೆಯವರಿಗೆ ಸ್ವಾತಂತ್ರ್ಯ ನೀಡದವರಿಗೆ ಸ್ವತಃ ಸ್ವಾತಂತ್ರ್ಯವನ್ನು ಅನುಭವಿಸಲು ಹಕ್ಕು ಇರುವುದಿಲ್ಲ.

-ಅಬ್ರಾಹಂ ಲಿಂಕನ್

★ ಪ್ರವೃತ್ತಿಗಳ ವಿಕಾಸ ಏಕಾಂತದಲ್ಲಿ ಆಗುತ್ತದೆ, ಆದರೆ ಚಾರಿತ್ರ್ಯದ ಸುಂದರ ನಿರ್ಮಾಣ ಬಿರುಗಾಳಿಗಳ ಮಧ್ಯೆಯೂ ಆಗುತ್ತದೆ.

-ಗಯಟೆ

★ ನೀವು ಏನು ಬಯಸುತ್ತೀರಿ ಎಂಬುದನ್ನು ನಿರ್ಧರಿಸಿ, ಅದಕ್ಕೆ ನೀವೇನು ಮಾಡಬಲ್ಲಿರಿ ಎಂಬುದನ್ನೂ ಯೋಚಿಸಿ, ನಿಮ್ಮ ಆದ್ಯತೆ ಗುರುತಿಸಿ ಮುನ್ನೆಡೆದರೆ ಯಶಸ್ಸು ಖಂಡಿತ.

-ಎಚ್.ಎಲ್.ಹಂಟ್

★ ಚಿಂತೆ ಒಂದು ರೀತಿಯಲ್ಲಿ ಹೇಡಿ ಇದ್ದಂತೆ, ಜೀವನವನ್ನು ವಿಷಯುಕ್ತವಾಗಿಸುತ್ತದೆ.

-ಚೇನಿಂಗ್

★ ಉತ್ತಮ ವ್ಯಕ್ತಿ ಮಾತಿನಿಂದ ಬಳಲುತ್ತಾನೆ, ಶುದ್ಧ ಚಾರಿತ್ರ್ಯದಿಂದ ಕಂಗೊಳಿಸುತ್ತಾನೆ.

-ಕನ್‌ಫ್ಯೂಷಿಯಸ್

★ ಸದಾ ಸಂತೋಷದಿಂದಿರುವ ಮನುಷ್ಯ ಬೋಧನೆ ಮಾಡದೆಯೂ, ಬೋಧಿಸಿದ ಮೇಲ್ಮೆಯನ್ನು ಪಡೆದಿರುತ್ತಾನೆ.

-ಮದರ್ ಥೆರೇಸಾ

★ ಕಾಯಾ, ವಾಚಾ, ಮನಸಾ ಬೇರೆಯವರಿಗೆ ಒಳಿತು ಮಾಡುವ ಸ್ವಭಾವ ಸಜ್ಜನರದ್ದು.

-ತುಲಸಿದಾಸ

★ ತನ್ನ ಆಸೆ, ಆಕಾಂಕ್ಷೆಗಳ ಈಡೇರಿಕೆಗಾಗಿ ತಿರುಗುವ ಕಾಮ ಪಿಪಾಸು ದಡ ಕಾಣದೆ ಒದ್ದಾಡುತ್ತಾನೆ.

-ಕುರಾನ್

★ ಬೇರೆಯವರ ತಪ್ಪು ಕಂಡು ನಗುವವನಿಗೆ ತನ್ನಲ್ಲಿರುವ ದೋಷ ಕಾಣಿಸುವುದಿಲ್ಲ.

-ಕಬೀರ

★ ಯಾರ ಬಗ್ಗೆ ನಿನಗೆ ದ್ವೇಷವಿದೆಯೋ ಅವನ ಬಳಿ ಮಧುರವಾಗಿ ಮತ್ತು ಹಿತವಾಗಿ ಮಾತನಾಡು.

-ಚಾಣಕ್ಯ

★ ಮನುಷ್ಯನ ಅಂತಃಕರಣದಲ್ಲಿ ಸಾತ್ವಿಕತೆಯ ಜ್ಯೋತಿಯನ್ನು ಜಾಗೃತಗೊಳಿಸುವುದು ಕರುಣೆ.

-ಕುವೆಂಪು

★ ನಿಜವಾದ ಗುರು ಎಂದರೆ ಅನುಭವ.

-ವಿ.ಕೃ.ಗೋಕಾಕ

★ ತಮಗೆ ಇಷ್ಟವಾಗಲಿಲ್ಲ ಎನ್ನುವ ಕಾರಣಕ್ಕೆ ಯಾರನ್ನಾದರೂ ಉನ್ನತ ಸ್ಥಾನದಿಂದ ಕನಿಷ್ಠ ಸ್ಥಾನಕ್ಕೆ ತಳ್ಳುವ ಪ್ರಯತ್ನ ನಡೆಸುವುದು ನಿಮ್ಮ ಜೀವನದ ದೊಡ್ಡ ಕಳಂಕವಾಗುತ್ತದೆ.

-ಎಂ.ಗೋಪಾಲಕೃಷ್ಣ ಅಡಿಗ

★ ನಿಮ್ಮ ಗುರಿ ಸೇವೆಯಾಗಿರಲಿ, ಅದನ್ನು ಗೆಲುವಿಗಾಗಿ ಮಾಡಬೇಡಿ. ಗೆಲುವು ತನ್ನಷ್ಟಕ್ಕೆ ನಿಮ್ಮನ್ನು ಹುಡುಕಿಕೊಂಡು ಬರುತ್ತದೆ.

-ವಿನೋಬಾ ಭಾವೆ